# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 888

2) ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 21-09-2022

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ಮತ್ಸ್ಯಕೃಷಿ ಆಶಾಕಿರಣ ಮತ್ತು ಮತ್ಸ್ಯಾಶ್ರಯ ಯೋಜನೆ" ಯಡಿಯಲ್ಲಿ ಫಲಾನುಭವಿಗಳಿಗೆ ದೊರೆಯುತ್ತಿರುವ ಸೌಲಭ್ಯಗಳ ವಿವರಗಳೇನು; | ಮತ್ಸ್ಯಕೃಷಿ ಆಶಾಕಿರಣ ಯೋಜನೆಯಡಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು ಪ್ರತಿ ಹೆಕ್ಟೇರ್ ಗೆ 4 ಸಾವಿರ ಬಲಿತ ಬಿತ್ತನೆ ಮೀನುಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50ರಷ್ಟು ಹಾಗೂ ಗರಿಷ್ಟ 27000 ಪ್ರತಿ ಹೆಕ್ಟೇರ್ ಗೆ ನೀಡಿ ಅರೆ ತೀವ್ರ ಮೀನು ಕೃಷಿಗೆ ಪ್ರೋತ್ಸಾಹಿಸಲಾಗುವುದು.<br><br>ಮತ್ಸ್ಯಾಶ್ರಯ ಯೋಜನೆಯಡಿ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಮತ್ತು ವಿಧಾನ ಪರಿಷತ್ತಿನ ಸದಸ್ಯರ ಸಹ ಅಧ್ಯಕ್ಷತೆಯ ಸಮಿತಿಯಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಅರ್ಹ ನಿರ್ವಸತಿ ಮೀನುಗಾರರನ್ನು ಆಯ್ಕೆ ಮಾಡಿ ಸಾಮಾನ್ಯ ಫಲಾನುಭವಿಗಳಿಗೆ ರೂ.1.20 ಲಕ್ಷ, ಎಸ್.ಸಿ/ಎಸ್.ಟಿ ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ – ರೂ.1.75 ಲಕ್ಷ ಮತ್ತು ಎಸ್.ಸಿ / ಎಸ್.ಟಿ. ನಗರ ಪ್ರದೇಶದ ಫಲಾನುಭವಿಗಳಿಗೆ ರೂ. 2.00 ಲಕ್ಷ ಸಹಾಯಧನವನ್ನು ಮನೆ ನಿರ್ಮಾಣಕ್ಕಾಗಿ ನೀಡಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಇದುವರೆಗೆ ಎಷ್ಟು ಜನ ಫಲಾನುಭವಿಗಳು ಸದರಿ ಯೋಜನೆಗಳಡಿ ಸೌಲಭ್ಯಗಳನ್ನು ಪಡೆದಿದ್ದಾರೆ (ಜಿಲ್ಲಾವಾರು ಮಾಹಿತಿ ನೀಡುವುದು); | ಮತ್ಸ್ಯಕೃಷಿ ಯೋಜನೆಯಡಿ ಕಳೆದ 05 ವರ್ಷಗಳಲ್ಲಿ ಒಟ್ಟು 427 ಜನ ಫಲಾನುಭವಿಗಳು ಸೌಲಭ್ಯವನ್ನು ಪಡೆದಿರುತ್ತಾರೆ. ಮತ್ಸ್ಯಾಶ್ರಯ ಯೋಜನೆಯಡಿ ಕಳೆದ 05 ವರ್ಷಗಳಲ್ಲಿ ಒಟ್ಟು 10718 ಜನ ಫಲಾನುಭವಿಗಳು ಸೌಲಭ್ಯವನ್ನು ಪಡೆದಿರುತ್ತಾರೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-1 ಮತ್ತು 2** ರಲ್ಲಿ ನೀಡಲಾಗಿದೆ. |
| ಇ) | ಸದರಿ ಯೋಜನೆಯಡಿ ದೊರೆಯುವ ಸೌಲಭ್ಯಗಳನ್ನು ಪಡೆದುಕೊಳ್ಳಲು ಅರ್ಹ ಫಲಾನುಭವಿಗಳನ್ನು ಗುರುತಿಸಿ ಅವರನ್ನು ಈ ಯೋಜನೆಗಳ ವ್ಯಾಪ್ತಿಗೆ ತರಲು ಸರ್ಕಾರ ಯಾವ ರೀತಿಯ ಕಾರ್ಯಕ್ರಮ ಮತ್ತು ಯೋಜನೆಗಳನ್ನು ರೂಪಿಸಿದೆ? | "ಮತ್ಸ್ಯಕೃಷಿ ಆಶಾಕಿರಣ" ಯೋಜನೆಯಡಿ ಕೆರೆಗಳನ್ನು ಗುತ್ತಿಗೆ ಪಡೆದಿರುವ ಮತ್ತು ಖಾಸಗಿ ಕೊಳಗಳಲ್ಲಿ ಮೀನು ಕೃಷಿ ಮಾಡುತ್ತಿರುವ ಮೀನು ಕೃಷಿಕರಿಗೆ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಸಹಾಯಧನ ಪಡೆಯಲು ಫಲಾನುಭವಿಯು ಇಲಾಖಾ / ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಪೂರ್ಣಕಾಲಿಕ / ದೀರ್ಘಕಾಲಿಕ ಕೆರೆಯ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಅಥವಾ ಟೆಂಡರ್-ಕಂ-ಹರಾಜು ಮೂಲಕ ಪಡೆದಿರತಕ್ಕದ್ದು ಮತ್ತು ಖಾಸಗಿ ಕೊಳಗಳಲ್ಲಿ ಮೀನು ಸಾಕಣೆ ಮಾಡುತ್ತಿರುವ ಮೀನು ಕೃಷಿಕರಿಗೂ ಸಹ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಒಬ್ಬ ಫಲಾನುಭವಿಗೆ ಗರಿಷ್ಟ 50 ಹೆಕ್ಟೇರ್ ಉಪಯುಕ್ತ ಜಲವಿಸ್ತೀರ್ಣ ಹೊಂದಿರುವ ಕೆರೆಗಳಿಗೆ ಹಾಗೂ ಖಾಸಗಿ ಕೊಳಗಳಿಗೆ ರೂ.6,75,000/- ಗಳವರೆಗೆ ಸಹಾಯಧನ ಪಡೆಯಬಹುದು. |

| | | |
|---|---|---|
| | | ಮೀನುಗಾರಿಕೆಯಲ್ಲಿ ತೊಡಗಿರುವ ವಸತಿ ರಹಿತ ಮೀನುಗಾರರಿಗೆ "ಮತ್ಸ್ಯಾಶ್ರಯ ಯೋಜನೆ" ಯಡಿ ಮನೆ ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮಂಜೂರಾದ ಮನೆಗಳಿಗೆ ಫಲಾನುಭವಿಗಳನ್ನು ಈ ಕೆಳಗೆ ತಿಳಿಸಿದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುತ್ತದೆ.<br><br>ಅಧ್ಯಕ್ಷರು - ಆಯಾ ವಿಧಾನಸಭಾ ಕ್ಷೇತ್ರದ ಶಾಸಕರು<br>ಸಹ ಅಧ್ಯಕ್ಷರು - ವಿಧಾನ ಪರಿಷತ್ತಿನ ಸದಸ್ಯರು<br>ಸದಸ್ಯ ಕಾರ್ಯದರ್ಶಿ- ಸಂಬಂಧ ಪಟ್ಟ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು |

ಸಂಖ್ಯೆ: ಪಸಂಮೀ ಇ-216 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 888 ರ

ಅನುಬಂಧ-01

ಮತ್ಸ್ಯಕೃಷಿ ಆಶಾಕಿರಣ ಯೋಜನೆಯಡಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ವಿವರ

| ಕ್ರ.ಸಂ | ಜಿಲ್ಲೆ | ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ | | | | |
|---|---|---|---|---|---|---|
| | | 2017-18 | 2018-19 | 2019-20 | 2020-21 | 2021-22 |
| 1 | ಬೆಂಗಳೂರು ಗ್ರಾಮಾಂತರ | 2 | 2 | 0 | 0 | 0 |
| 2 | ಬಾಗಲಕೋಟೆ | 4 | 2 | 2 | 2 | 0 |
| 3 | ಬೆಂಗಳೂರು ನಗರ | 3 | 2 | 0 | 2 | 0 |
| 4 | ಬೆಳಗಾವಿ | 1 | 3 | 0 | 0 | 0 |
| 5 | ಬಳ್ಳಾರಿ | 4 | 1 | 12 | 9 | 0 |
| 6 | ಬೀದರ್ | 7 | 1 | 2 | 0 | 0 |
| 7 | ಚಾಮರಾಜನಗರ | 2 | 1 | 3 | 1 | 0 |
| 8 | ಚಿಕ್ಕಬಳಾಪುರ | 18 | 2 | 3 | 2 | 0 |
| 9 | ಚಿಕ್ಕಮಗಳೂರು | 4 | 5 | 5 | 8 | 0 |
| 10 | ಚಿತ್ರದುರ್ಗ | 2 | 3 | 2 | 0 | 0 |
| 11 | ದಾವಣಗೆರೆ | 4 | 1 | 5 | 2 | 0 |
| 12 | ಧಾರವಾಡ | 2 | 2 | 1 | 0 | 0 |
| 13 | ಗದಗ | 0 | 0 | 0 | 0 | 0 |
| 14 | ಹಾಸನ | 0 | 11 | 13 | 3 | 0 |
| 15 | ಹಾವೇರಿ | 0 | 1 | 1 | 0 | 0 |
| 16 | ಕಲ್ಬುರಗಿ | 0 | 1 | 2 | 3 | 0 |
| 17 | ಕೊಡಗು | 1 | 11 | 6 | 3 | 0 |
| 18. | ಕೋಲಾರ | 18 | 4 | 3 | 0 | 0 |
| 19 | ಕೊಪ್ಪಳ | 5 | 0 | 19 | 2 | 0 |
| 20 | ಮಂಡ್ಯ | 11 | 5 | 1 | 7 | 0 |
| 21 | ಮೈಸೂರು | 6 | 3 | 7 | 2 | 0 |
| 22 | ರಾಯಚೂರು | 2 | 1 | 1 | 0 | 0 |
| 23 | ರಾಮನಗರ | 15 | 7 | 8 | 5 | 0 |
| 24 | ಶಿವಮೊಗ್ಗ | 9 | 12 | 22 | 3 | 0 |
| 25 | ತುಮಕೂರು | 12 | 4 | 8 | 7 | 0 |
| 26 | ವಿಜಯಪುರ | 9 | 8 | 0 | 0 | 0 |
| 27 | ಯಾದಗಿರಿ | 1 | 0 | 2 | 2 | 0 |
| 28 | ಉತ್ತರಕನ್ನಡ | 0 | 0 | 0 | 0 | 0 |
| 29 | ದಕ್ಷಿಣಕನ್ನಡ | 0 | 0 | 0 | 1 | 0 |
| 30 | ಉಡುಪಿ | 0 | 0 | 0 | 0 | 0 |
| **ಒಟ್ಟು** | | **142** | **93** | **128** | **64** | **0** |

—*—*—*—*—*—*—

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆ ದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 888 ಕ್ಕೆ

ಅನುಬಂಧ-02

## ಮತ್ಸ್ಯಾಶ್ರಯ ಯೋಜನೆಯಡಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ವಿವರ

| ಕ್ರ.ಸಂ. | ಜಿಲ್ಲೆ | ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ | | | | |
|---|---|---|---|---|---|---|
| | | 2014-15 | 2015-16 | 2016-17 | 2017-18 | 2018-19 |
| 1 | ಬೆಂಗಳೂರು ಗ್ರಾಮಾಂತರ | 6 | 22 | 60 | 40 | 30 |
| 2 | ಬಾಗಲಕೋಟೆ | 104 | 37 | 107 | 19 | 76 |
| 3 | ಬೆಂಗಳೂರು ನಗರ | 21 | 3 | 21 | 3 | 0 |
| 4 | ಬೆಳಗಾವಿ | 112 | 48 | 268 | 177 | 106 |
| 5 | ಬಳ್ಳಾರಿ | 82 | 54 | 95 | 70 | 80 |
| 6 | ಬೀದರ್ | 55 | 34 | 110 | 100 | 25 |
| 7 | ಚಾಮರಾಜನಗರ | 69 | 30 | 35 | 58 | 10 |
| 8 | ಚಿಕ್ಕಬಳಾಪುರ | 39 | 33 | 100 | 45 | 15 |
| 9 | ಚಿಕ್ಕಮಗಳೂರು | 29 | 14 | 9 | 0 | 10 |
| 10 | ಚಿತ್ರದುರ್ಗ | 113 | 39 | 33 | 18 | 59 |
| 11 | ದಾವಣಗೆರೆ | 68 | 36 | 26 | 5 | 80 |
| 12 | ಧಾರವಾಡ | 15 | 26 | 120 | 26 | 10 |
| 13 | ಗದಗ | 47 | 20 | 63 | 18 | 10 |
| 14 | ಹಾಸನ | 87 | 43 | 51 | 11 | 10 |
| 15 | ಹಾವೇರಿ | 112 | 51 | 54 | 32 | 105 |
| 16 | ಕಲ್ಬುರಗಿ | 87 | 11 | 363 | 59 | 84 |
| 17 | ಕೊಡಗು | 22 | 2 | 14 | 7 | 10 |
| 18 | ಕೋಲಾರ | 77 | 54 | 115 | 92 | 40 |
| 19 | ಕೊಪ್ಪಳ | 64 | 32 | 56 | 36 | 18 |
| 20 | ಮಂಡ್ಯ | 116 | 37 | 98 | 29 | 10 |
| 21 | ಮೈಸೂರು | 107 | 40 | 58 | 64 | 20 |
| 22 | ರಾಯಚೂರು | 48 | 4 | 88 | 0 | 12 |
| 23 | ರಾಮನಗರ | 81 | 40 | 202 | 63 | 15 |
| 24 | ಶಿವಮೊಗ್ಗ | 80 | 30 | 99 | 37 | 97 |
| 25 | ತುಮಕೂರು | 145 | 106 | 140 | 130 | 75 |
| 26 | ವಿಜಯಪುರ | 35 | 82 | 119 | 46 | 7 |
| 27 | ಯಾದಗಿರಿ | 42 | 20 | 110 | 20 | 17 |
| 28 | ಉತ್ತರಕನ್ನಡ | 296 | 62 | 209 | 65 | 147 |
| 29 | ದಕ್ಷಿಣಕನ್ನಡ | 116 | 39 | 64 | 25 | 171 |
| 30 | ಉಡುಪಿ | 383 | 109 | 609 | 242 | 520 |
| **ಒಟ್ಟು** | | **2658** | **1158** | **3496** | **1537** | **1869** |

— * — * — * — * — * — * — * —